**ಅಸಲು ದಾವ ಸಂಖ್ಯೆಃ 294/2013**
**ಪಿ ಡಬ್ಲ್ಯೂ -1**

ದಿಃ 04.01.2023. ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಪಿ ಎಸ್ ಪಿ ರವರಿಂದಃ-**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಎಸ್ ಎಲ್ ಜಿ ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ವಾದಿಯ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/-ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

1. ನನ್ನ ತಂದೆ ಹೆಬ್ಬಟ್ಟಿನ ರುಜು ಮಾಡುತ್ತಿದ್ದರು. ಭೂನ್ಯಾಯಮಂಡಳಿಯ ಫಾರಂ ನಂಬರ 7ನ್ನು ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಭೂನ್ಯಾಯಮಂಡಳಿಯ ಫಾರಂ ನಂಬರ 7ರ ದೃಡಿಕೃತ ನಕಲನ್ನು ಪಡೆದು ಹಾಜರುಪಡಿಸಿದರೆ ಅದರಲ್ಲಿ ಸಹಿ ಇರುತ್ತದೆ ಎಂಬ ಕಾರಣದಿಂದ ಅದನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಶ್ರೀಪತಿ ಕುಲಂ ರವರು ಫಾರಂ ನಂಬರ 7 ನ್ನು ಭೂನ್ಯಾಯಮಂಡಳಿಗೆ ಸಲ್ಲಿಸುವಾಗ ಅವರ ಹೆಂಡತಿ ಹೆಸರು ಲಕ್ಷ್ಮೀ ಎಂದು ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ಶ್ರೀಪತಿ ಕುಲಂ ಅವರು ತನ್ನ ಹೆಂಡತಿ ಹೆಸರು ದೇವಕಾಬಾಯಿ ಎಂದು ಬರೆಸಿದ್ದಾರೆ ಎಂದು ತೋರಿಸುವ ಫಾರಂ ನಂಬರ 7 ನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

2. ದಾವಾ ಆಸ್ತಿಯ ಅಧಿಭೋಗದಾರಿಕೆ ಹಕ್ಕಿನ ಶುಲ್ಕವನ್ನು ಜಂಟಿಯಾಗಿ ತುಂಬಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಧಿಬೋಗದಾರಿಕೆ ಹಕ್ಕಿನ (occupancy )ಶುಲ್ಕವನ್ನು ಶ್ರೀಪತಿ ಕುಲಂ ರವರು ಮಾತ್ರ ತುಂಬಿರುತ್ತಾರೆ ಎಂದರೆ ಸರಿಯಲ್ಲ. ದೇವಕಾಬಾಯಿ ರವರಿಗೆ ಹಾಗೂ ಶ್ರೀಪತಿ ಕುಲಂ ರವರಿಗೆ ಯಾವುದೇಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸ್ವತಃ ಹೇಳುತ್ತೇನೆ ದೇವಕಾಬಾಯಿ ರವರು ನನ್ನ ತಾಯಿ ಆಗಿರುತ್ತಾರೆ. ಶ್ರೀಪತಿ ಕುಲಂ ಹಾಗೂ ನನಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸಂಬಂಧ ಇದೆ. ಶ್ರೀಪತಿ ಕುಲಂ ಹಾಗೂ ನನ್ನ ತಂದೆಯ ಹೆಸರಾದ ಶ್ರೀಪತಿ ಪಾಟೀಲ ರವರ ಹೆಸರು ಶ್ರೀಪತಿ ಎಂದು ಒಂದೇ ಇರುವ ಗೈರು ಪಾಯಿದೆಯನ್ನು ಪಡೆದು ನಾನು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನನಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂಬರ 12 ರಿಂದ 16 ರವರಿಗೆ ಸೇರಿದ ಆಸ್ತಿಯನ್ನು ಎತ್ತಿಹಾಕುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**